## ಇಲ್ಲಿಯವರೆಗೆ



ಕಾಯಕನಾಥನಿಗೆ ತಾನು ಕಳೆದುಕೊಂಡ ಮಗ ಸಾರಂಗ ಈಗ ಪಾಂಡುರಂಗನ ರೂಪದಲ್ಲಿ ದೊರೆತನೇನೋ ಎಂಬ ಭಾವನೆ ಉಂಟಾಗಿ ಪಾಂಡುರಂಗನನ್ನು ಅತಿಯಾಗಿ ಪ್ರೀತಿಸಲಾರಂಭಿಸುತ್ತಾನೆ. ವೀರಭದ್ರನನ್ನು ಚಿರತೆ ತಿಂದು ಹಾಕಿದ ಬಳಿಕ ರತ್ನವ್ವಳಿಗೆ ಬೇಸರದ ಜೊತೆಗೆ ಕಮಲಿಯನ್ನು ಹೇಗೆ ನಿರ್ವಹಣೆ ಮಾಡುವುದು ಎಂಬ ಚಿಂತೆಯೂ ಕಾಡುತ್ತದೆ. ಈ ಮಧ್ಯೆ ರತ್ನವ್ವ ಜಂಪಣ್ಣನ ಮನೆಗೆ ಬಂದು ಕಮಲಿಯನ್ನು ಕಾಯನೊಂದಿಗೆ ಮದುವೆ ಮಾಡಿದರೆ ಹೇಗೆ ಎಂಬ ಪ್ರಸ್ತಾಪ ಮಾಡುತ್ತಾಳೆ. ಜಂಪಣ್ಣನಿಗೆ ಇದು ಅಚ್ಚರಿ ತಂದ ವಿಚಾರವಾದರೂ ಒಂದು ಕ್ಷಣ ಯೋಚಿಸಿದಾಗ ಅವನಿಗೂ ಸರಿ ಎನಿಸುತ್ತದೆ. ಇದನ್ನು ಕಾಯಕನಾಥನ ಬಳಿಯೂ ಹೇಳಿದಾಗ ಸದ್ಯ ಮದುವೆಯ ವಿಚಾರ ಮಾಡೋದಿಲ್ಲ, ಯಾವ ಬಂಧನವನ್ನೂ ಮಾಡಿಕೊಳ್ಳಲು ಇಷ್ಟವಿಲ್ಲ ಎನ್ನುತ್ತಾನೆ.

ಆದಾಗಿ ಒಮ್ಮೆ ಪಾಂಡುರಂಗ ಸೇರಿ ಮನೆಯವರಿಗೆಲ್ಲ ಜ್ವರ ಬರುತ್ತದೆ. ಮಗುವಾದ ಕಾರಣ ಪಾಂಡುರಂಗನಿಗೆ ಬೇಗ ವಾಸಿಯಾಗದೆ ಆಸ್ಪತ್ರೆಗೆ ದಾಖಲಾಗಬೇಕಾಗುತ್ತದೆ. ಸಾರಂಗನಿಗೆ ಹಾವು ಕಚ್ಚಿದಾಗ ಕಾಯಕನಾಥ ಅವನನ್ನು ಹೆಗಲಮೇಲೆ ಕೂರಿಸಿ ಆಸ್ಪತ್ರೆಗೆ ಅಲೆದಾಡಿದರೂ ವೈದ್ಯರಿಲ್ಲದೆ ಆತ ಸಾವನ್ನಪ್ಪಬೇಕಾದ ಪ್ರಸಂಗ ನೆನಪಾಗಿ ಕಾಯಕನಾಥ ಮಂಕಾಗುತ್ತಾನೆ. ಕಮಲಿ ತನ್ನ ಜೀವನದ ಕಷ್ಟವನ್ನೆಲ್ಲ ಕಾಯಕನಾಥನ ಬಳಿ ಹೇಳಿಕೊಂಡಾಗ ಇಬ್ಬರೂ ಸಮಾನ ದುಃಖಿಗಳು ಎಂಬ ಭಾವನೆ ಕಾಯಕನಾಥನಲ್ಲಿ ಮೂಡುತ್ತದೆ. ಇದುವರೆಗೆ ಜೀವನದ ಮೇಲಿದ್ದ ವೈರಾಗ್ಯ ಮಾಯವಾಗಿ ಕಮಲಿ ಒಪ್ಪಿದರೆ ಆಕೆಯೊಂದಿಗೆ ಮದುವೆಯಾಗುವ ಇಂಗಿತ ವ್ಯಕ್ತಪಡಿಸುತ್ತಾನೆ.

ತಮ್ಮ ಖರ್ಚಿನಲ್ಲಿ ಊಟದ ವ್ಯವಸ್ಥೆ ಮಾಡಿದ್ದರು. ಕಾಯ ಎಷ್ಟೇ ಬೇಡವೆಂದರೂ ಅವರು ಕಿವಿಗೆ ಹಾಕಿಕೊಳ್ಳಲಿಲ್ಲ.

'ಎಲ್ಲಾ ನಿನ್ನ ಮಾತು ಕೇಳಲು ಆಗುವುದಿಲ್ಲ.. ಇದು ನಮ್ಮ ಖುಷಿಗೆ ಮಾಡ್ತಿರೋದು.. ನಾವೆಲ್ಲಾ ಇಷ್ಟು ದಿನವಾದರೂ ಸೇರಿ ಜೊತೆಗೆ ಕೂತು ಉಂಡಿಲ್ಲ.. ನಿನ್ನ ಮದುವೆ ಒಂದು ನೆಪ ಮಾತ್ರ.. ಇದು ಇಲ್ಲಿನ ಸೌಹಾರ್ದತೆಗೆ ನಾವು ಮಾಡಿಕೊಂಡಿರುವುದು ..ಅಷ್ಟೇ' ಎಂದ ಜಂಪಯ್ಯ. ಕಾಯನಿಗೆ ಎದುರು ಮಾತನಾಡಲು ಆಗಲಿಲ್ಲ. ಜಂಪಯ್ಯ ಕಾಯನಿಗೆ ಹೊಸ ಬಿಳಿ ಅಂಗಿ ಮತ್ತು ಪಂಚೆ ತಂದಿದ್ದ. ಶಿವಯ್ಯ ಕಮಲಿಗೆ ಸೀರೆ, ರವಿಕೆ, ಪಾಂಡುರಂಗನಿಗೆ ಹೊಸ ಬಟ್ಟೆ, ಅನಂತಯ್ಯನ ಬಳಿ ಸಾಲ ಮಾಡಿ ತಂದಿದ್ದ. ಮದುವೆಯ ದಿನ ಸರಳವಾಗಿ ಎಲ್ಲರೂ ಜೊತೆಗೂಡಿದರು. ಎಲ್ಲರೂ ತಮ್ಮದೇ ಮನೆಯಲ್ಲಿನ ಹಬ್ಬದಂತೆ ಸೇರಿಕೊಂಡರು. ಎಲ್ಲರೂ ಕಾಯನ ಅಪೇಕ್ಷೆಯಂತೆ ಕುಮುದಿನಿಯ ತೀರದಲ್ಲಿ, ಜಂಪಯ್ಯ ನೆಟ್ಟ ಲಿಂಗದ ಕಲ್ಲಿನ ಮರದ ಬುಡದಲ್ಲಿ ಸೇರಿಕೊಂಡರು. ಕಾಡಿನ ಹೂಗಳಿಂದ ಕಟ್ಟಿದ ಎರಡು ಮಾಲೆಗಳು ಸಿದ್ಧವಿದ್ದವು.

'ನಾವೆಲ್ಲಾ ಮಣ್ಣಿನ ಮಕ್ಕಳು.. ನಮ್ಗೆ ಭೂತಾಯಿಯೇ ದೇವರು.. ಇಲ್ಲಿನ ನದಿ ಕುಮುದಿನಿ ನಮ್ಮ ಜೀವನ ವಾಹಿನಿ.. ನಮ್ಮನ್ನು ಪೊರೆಯುವ ತಾಯಿ ಇವಳು.. ಇಲ್ಲೇ ಪ್ರಮಾಣ ಮಾಡಿ..' ಜಂಪಯ್ಯ ನುಡಿದಾಗ ಮದುಮಕ್ಕಳು ನಿಧಾನವಾಗಿ ಕುಮುದಿನಿಯ ಕಡೆಗೆ ಹೆಜ್ಜೆ ಹಾಕಿದರು. ಪಾಂಡು ಅವರಿಬ್ಬರ ನಡುವೆ ಬೆಸೆಯುವ ಕೊಂಡಿಯಂತೆ ಕೈ ಹಿಡಿದುಕೊಂಡಿದ್ದ. ಆ ಚಿತ್ರವು, ಎಲ್ಲರ ಕಣ್ಣಿಗೆ ಇನ್ನೂ ಆಪ್ಯಾಯಮಾನವಾಗಿ ಕಾಣುತಿತ್ತು.

ನದಿಯ ನೀರು ಪಾದಗಳನ್ನು ಸೋಕಿದವು. ಅಲ್ಲೇ ನಿಂತು ಕುಮುದಿನಿಯ ನೀರನ್ನು ಬೊಗಸೆಯಲ್ಲಿ ಇಬ್ಬರೂ ಕೈಗೆತ್ತಿಕೊಂಡರು. ಕಾಯ ನುಡಿದ, 'ಇಲ್ಲಿರುವ ಪಂಚಭೂತಗಳನ್ನು ಸಾಕ್ಷಿಯಾಗಿ ಹೇಳುವೆ.. ಇಂದಿನಿಂದ ಕಮಲಿ ನನ್ನ ಹೆಂಡತಿ, ಪಾಂಡುರಂಗ ನನ್ನ ಮಗ.. ಕಾಯಾ ವಾಚಾ ಮನಸಾ ನಾನು ಈ ಸಂಬಂಧವನ್ನು ಸ್ವೀಕರಿಸಿದ್ದೇನೆ..' ಎಂದು ತಲೆಯ ಮೇಲೆ ಹೊಳೆಯುತ್ತಿದ್ದ ಸೂರ್ಯನನ್ನು ಕಂಡು ನುಡಿದವನು, ನೀರನ್ನು ಮತ್ತೆ ನದಿಗೆ ಬಿಟ್ಟ. ಕಮಲಿ ಮನದಲ್ಲೇ ಅವನು ಹೇಳಿದ್ದನ್ನು ಉಚ್ಚರಿಸಿ ಅಂತೆಯೇ ಮಾಡಿದಳು. ಪುನಃ ಆ ಮರದ ಬುಡಕ್ಕೆ ಬಂದು ಆ ಲಿಂಗಾಕಾರದ ಕಲ್ಲಿನ ಮುಂದೆ ಇದ್ದ ದೀಪವನ್ನು ಹಚ್ಚಿದರು.

'ನಿಮ್ಮಿಬ್ಬರ ಬದುಕಲ್ಲೂ ಇನ್ನು ಮುಂದೆ ಇದೇ ರೀತಿ ಬೆಳಕು ತುಂಬಲಿ..' ಹಿರಿಯ ಮುತ್ತೈದೆ ಮನಸಾರೆ ಆಶೀರ್ವದಿಸಿದರು.

ನಂತರ ಎಲ್ಲರ ಸಮ್ಮುಖದಲ್ಲಿ ಹೂಮಾಲೆಗಳನ್ನು ಪರಸ್ಪರ ಬದಲಿಸಿಕೊಂಡರು. ರತ್ನವ್ವ ಕೊಟ್ಟ ಕರಿಮಣಿ ಸರವನ್ನು, ಕಾಯ ಕಮಲಿಯ ಕೊರಳಿಗೆ ಕಟ್ಟಿದ. ಇಬ್ಬರನ್ನೂ ಮಣೆಯಂತಿದ್ದ ಹಲಗೆ ಹಾಕಿ ಕೆಳಗೆ ಕುಳ್ಳಿರಿಸಲಾಯಿತು. ಹೆಂಗಸರು ತಮಗೆ ತೋಚಿದ ಹಾಡುಗಳನ್ನು ಹಾಡಿ ಸಂಭ್ರಮಿಸಿದರು. ಕೆಲವರು ಕುಣಿದರು. ಜಂಪಯ್ಯ ತನ್ನದೇ ಕೃಷಿಯಲ್ಲಿ ಬೆಳೆದ ನಿಂಬೆ ಹಣ್ಣಿನ ಪಾನಕ ಮಾಡಿ ಎಲ್ಲರಿಗೂ ಹಂಚಿದ. ಬಿಸಿಲ ಧಗೆಗೆ ಆ ಪಾನಕ ತುಂಬಾ ಹಿತವೆನಿಸಿತು. ಕಮಲಿ ಮತ್ತು ಕಾಯ ಇಬ್ಬರೂ ಇಂಥ ಸಂಭ್ರಮದ ವಾತಾವರಣವನ್ನು ನಿರೀಕ್ಷಿಸಿರದ ಕಾರಣ ಅವರಿಗೂ ಅವೆಲ್ಲವೂ ಹಿತವೆನಿಸಿ ಮನಸ್ಸನ್ನು ಮುದಗೊಳಿಸಿದವು. ಹೊತ್ತೇರುತ್ತಲೇ ಊಟದ ಶಾಸ್ತ್ರಕ್ಕೆ ಸಿದ್ಧತೆ ನಡೆಯಿತು. ಅಲ್ಲೇ ಬೆಳೆದ ಬಾಳೆಗಿಡಗಳ ಎಲೆ ಹಾಕಿ ಸರಳವಾದ ಊಟದ ಕಾರ್ಯಕ್ರಮ ಮುಗಿಸಿದರು. ರತ್ನವ್ವನೇ ಮುಂದೆ ನಿಂತು ಮನೆ ತುಂಬುವ ಕಾರ್ಯ ನಡೆಸಿದರು.

'ಕಾಯ.. ಇಷ್ಟು ದಿನ ನಿನಗೆ ಸಂಸಾರ ಇರಲಿಲ್ಲ.. ಮನೆ ಇರಲಿಲ್ಲ.. ಸನ್ಯಾಸಿ ಥರ ಇದ್ದೆ.. ಆದರೆ, ಈಗ ಹಾಗಲ್ಲ.. ನೀನು ವಿಚಾರವಂತ ಇದ್ದೀ.. ನಿನಗೆ ಬಿಡಿಸಿ ಏನೂ ಹೇಳಬೇಕಾಗಿದ್ದಿಲ್ಲ.. ಇದೇ ಇನ್ನು ಮೇಲೆ ನಿನಗೆ ಮನೆ.. ಕಮಲಿ ನಿನ್ನ ಹೆಂಡತಿ.. ರಂಗ ನಿನ್ನ ಮಗು.. ಇಬ್ಬರೂ ಹಳೆಯ ಎಲ್ಲಾ ಕಹಿ ಮರೆತು ಹೊಸತಾಗಿ ಈ ಜೀವನ ಸ್ವೀಕರಿಸು..' ಎಂದು ಶಿವಯ್ಯ ಹಿರಿಯನ ಸ್ಥಾನದಲ್ಲಿ ನಿಂತು ಹೇಳಿದ.

ಕಾಯ ಎಲ್ಲರ ಕಾಲಿಗೆರಗಿ ಆಶೀರ್ವಾದ ಬೇಡಿದ. ಸ್ವಲ್ಪ ಹೊತ್ತಿದ್ದು ಶಿವಯ್ಯ ರತ್ನ ಅಲ್ಲಿಂದ ಹೊರಟರು.

'ನಮ್ಗೆ ಹೊತ್ತಾಗುತ್ತೆ.. ನಾಳೆ ಕೆಲಸಕ್ಕೆ ತಯಾರಿ ಮಾಡಬೇಕು.. ಬಿಡುವಾದಾಗ ಬರುತ್ತೇವೆ.. ಚಿಂತೆ ಮಾಡಬೇಡ..' ಎಂದು ಕಮಲಿಗೆ ಹೇಳಿ ಜಂಪಯ್ಯನ ಜವಾಬ್ದಾರಿ ನೆನಪಿಸಿ ಅವರು ಹೊರಟು ಬಿಟ್ಟರು. ಕಾಯ ಈಗ ಜಂಪಯ್ಯನ ಮನೆ ಜಗುಲಿಯಿಂದ ಶಿವಯ್ಯನ ಮನೆಯೊಳಗೆ ಅವನ ವಾಸ ಬದಲಿಸಿಕೊಂಡ.

ಕಮಲಿ ನಾಚಿ ತುಸು ಅಂತರದಲ್ಲೇ ಕುಳಿತಿದ್ದಳು. ಕಮಲಿಯನ್ನು ಎವೆಯಿಕ್ಕದೇ ಈಗ ಸರಿಯಾಗಿ ನೋಡಿದ ಕಾಯ. ಅಷ್ಟರವರೆಗೂ ಅವಳ ರೂಪ ಅವನ ಮನದಲ್ಲಿ ಅಚ್ಚಾಗಿರಲಿಲ್ಲ. ಮಿನಾಲಿಗಿಂತಲೂ ತುಸು ಪ್ರೌಢ ಕಳೆ ಕಮಲಿಯ ಮುಖದಲ್ಲಿತ್ತು. ಬಹುಶಃ ಜೀವನದಲ್ಲಿ ನೊಂದು ಬೆಂದು ಹಣ್ಣಾಗಿ ಹೋಗಿರುವುದರಿಂದ ಇರಬಹುದೆನಿಸಿತು.

'ಕಮಲಿ.. ಇಷ್ಟು ದಿನ ತುಂಬಾ ಕಷ್ಟಪಟ್ಟೆ ನೀನು.. ಇನ್ನು ಮೇಲೆ ನಿನಗೆ ಸುಖದ ಸುಪ್ಪತ್ತಿಗೆ ಕೊಡುವೆ ಎಂದು ಹೇಳುವುದಿಲ್ಲ.. ಇಷ್ಟು ದಿನ ನಾನೂ ಒಬ್ಬನೇ ಇದ್ದೆ.. ಬದುಕಲು ನನಗೆ ಆಸಕ್ತಿನೂ ಇರಲಿಲ್ಲ. ಕಾರಣಗಳು ಇರಲಿಲ್ಲ.. ಹೇಗೋ ಜೀವನ ಬೇಸರದಿಂದ ಕಳೆಯುತ್ತಿದ್ದೆ.. ಇನ್ನು ಮೇಲೆ ನನ್ನ ಆದ್ಯತೆಗಳು ನೀನು ಮತ್ತು ಈ ಪಾಂಡು. ಇಬ್ಬರನ್ನೂ ಚೆನ್ನಾಗಿ ನೋಡಿಕೊಳ್ಳುವೆ. ಚಿಂತಿಸಬೇಡ' ಎಂದ. ಕಮಲಿ ಸಂಕೋಚದಿಂದ ತಲೆ ತಗ್ಗಿಸಿದಳು.

'ನನ್ನ ಬದುಕಲ್ಲೂ ಇಂಥ ಒಂದು ದಿನ ಬರಬಹುದು ಎಂದು ಭಾವಿಸಿರಲಿಲ್ಲ.. ನನ್ನ ಹಣೆಬರಹವನ್ನು ಹಳಿಯುವುದಲ್ಲದೇ ಬೇರೆ ವಿಧಿ ಇರಲಿಲ್ಲ ನನಗೆ.. ಆದರೆ ನೀವು ನನಗೆ ಹೊಸ ಜೀವನ ಕೊಟ್ಟಿರಿ.. ಅದಿಕ್ಕೆ ಸದಾ ಋಣಿ ನಿಮಗೆ'

'ಅಷ್ಟು ದೊಡ್ಡ ಮಾತು ಏಕೆ ಆಡುವೆ ಕಮಲಿ..? ನನ್ನಿಂದ ಮಾತ್ರ ಅಲ್ಲ.. ನಿನ್ನಿಂದಲೂ ನನಗೆ ಹೊಸ ಜೀವನ ಸಿಕ್ಕಿದೆ.. ವೈರಾಗ್ಯವೇ ಹೊತ್ತು ಬಂದಿದ್ದ ನನಗೆ ಮತ್ತೆ ಸಂಸಾರಿ ಮಾಡಿದೆ ನೀನು.. ಈ ಪಾಂಡುರಂಗ ನನ್ನನ್ನು ಮತ್ತೆ ಈ ಸಂಸಾರದ ಮೋಹಕ್ಕೆ ಎಳೆದು ಕಟ್ಟಿ ಬಿಟ್ಟ..' ತನ್ನ ಮಡಿಲಲ್ಲಿ ಆಡುತ್ತಿದ್ದ ಪಾಂಡುವಿನ ಕೆನ್ನೆಗೆ ಕಾಯ ಹೂಮುತ್ತನಿತ್ತ.